ಅತ್ತೆಯ ಆಗಮನಕ್ಕೆ ಖುಷಿಯನ್ನೇಪಟ್ಟರಾಯ್ತು ಎಂದು ಅಂದುಕೊಂಡಳು. ಅಲ್ಲದೆ ಕೆಲವು ವರ್ಷಗಳಿಂದೀಚೆ ಪುರುಷೋತ್ತಮನೂ ಕೆಲಸ ಬೊಗಸ ಅಂತ ಆಫೀಸಿನಲ್ಲಿ ಕಾಲಕಳೆಯುವುದೇ ಆಗಿಹೋಗಿತ್ತು. ಗಂಡನ ಮೇಲೆ ಸಂಶಯಪಡುವುದು ತರವಲ್ಲ ಎಂದುಕೊಂಡರೂ ತನ್ನ ಬಳಿ ಬಾರದ ಗಂಡ ತನ್ನ ಹೊಟ್ಟೆಯ ಮೇಲೆ ಮೂಡಿದ ಬಾಸುಂಡೆಯಂತಹ ಗೆರೆಗಳಿಂದಾಗಿಯೇ ದೂರವಾಗಿದ್ದಾನೆ ಎಂಬ ನೋವು ಒಬ್ಬಂಟಿ ಶಾರಿಯನ್ನು ಯಾವತ್ತೂ ಚುಚ್ಚುತ್ತಿತ್ತು.

ಅಂದು ಬೆಳಿಗ್ಗೆ ಬಿಂಜಲು ತೆಗೆಯುತ್ತಿದ್ದ ಶಾರಿ ತನ್ನ ಪೊತ್ತೆ ಕೂದಲನ್ನು ಮೀಯಲು ಹೊರಟವರಂತೆ ಮೇಲಕ್ಕೆತ್ತಿ ಬಿಗಿದಿದ್ದ ಆ ಗಂಟನ್ನೂ ದಾಟಿ ಕೆಳಗಿಳಿಯುತ್ತಿದ್ದ ಬೆವರ ಹನಿ ಕುತ್ತಿಗೆಯ ಮೇಲ್ದಾಸಿ ಬೆನ್ನ ಹುರಿಯ ನೇರ್ತ ಕೆಳಗೆ ದಳಗುಡುತ್ತ ಇಳಿಯುತ್ತಲಿತ್ತು. ತೊಡೆಸಂದಿಯಲ್ಲಷ್ಟೇ ಅಲ್ಲ, ಪಲಕದ ಕಂಕುಳು ಒದ್ದೆ ಮುದ್ದೆಯಾಗಿ ಕೈಯಾಡಿಸಿದರೆ ನೋಯುವಷ್ಟು ಕಂಕುಳಲ್ಲೂ ಕೊರೆತ ಕಾಣಿಸುತ್ತಿತ್ತು ಶಾರಿಗೆ. ಶಾರಿಯ ಪಲಕ ಪಿಸಿಯುವುದೂ ಕಂಕುಳಲ್ಲೇ. ಬೆವರಿನ ಹೊಡೆತಕ್ಕೆ ಬಟ್ಟೆಯೆಲ್ಲ ಲಡ್ಡುಬಡಕುಗಳಾಗಿ ತಿಂಗಳೊಪ್ಪತ್ತಲ್ಲಿ ಅಡುಗೆ ಮನೆಯ ಕೈವರೆಸಿಗಳಾಗಿಬಿಡುತ್ತಿದ್ದವು.

ಅಲವರಿಕೆ, ಎಂತಹದ್ದೋ ಆತಂಕದಲ್ಲಿದ್ದ ಶಾರಿಗೆ, 'ನೀನೋ, ನಿನ್ನ ಅವತಾರವೋ. ನಿನ್ನ ಹೊಟ್ಟೆಯನ್ನಂತೂ ನೋಡುವಂತಿಲ್ಲ, ನಿನ್ನ ಮುಖವನ್ನಾದರೂ ಸರಿಯಾಗಿಟ್ಟುಕೋ ಮಾರಾಯ್ತಿ. ಒಳ್ಳೆ ಗದ್ದೆ ಹೂಡಲು ಹೊರಟವಳಂತೆ ಕಾಣಿಸುತ್ತಿದ್ದೀಯಾ. ಅವರಾದರೂ ಬೇಕು, ಕೆಲಸಕ್ಕೆ ಹೋಗುವಾಗ ಮಾತ್ರ ಹಳೆ ಬಟ್ಟೆ ತೊಡುತ್ತಾರೆ' ಎಂದು ತನ್ನ ತಾಯಿಯ ಎದುರೇ ಅಪಹಾಸ್ಯ ಮಾಡಿದ್ದೇ ನೆಪ. ಎಷ್ಟೊ ವರ್ಷಗಳಿಂದ ಹೇಳಿದ್ದನ್ನೆಲ್ಲಾ ಹೇಳಿಸಿಕೊಂಡು ಬಂದ ಶಾರಿ, ಮೈಮೇಲೆ ಖಬರೇ ಇಲ್ಲದವರಂತೆ ಕಿರುಚಿ, ಕೈಗೆ ಸಿಕ್ಕ ಪಾತ್ರೆ ಪಗಡೆಗಳನ್ನು ಕುಕ್ಕಿ, 'ಹೆಂಡತಿ ಕಂಡರೆ ಹೇಕರಿಕೆ ನಿಮಗೆ. ಅದಕ್ಕೇ ಅಲ್ಲವೇ ನನ್ನನ್ನು ದೂರ ಇಡುತ್ತಿರುವುದು. ನನ್ನನ್ನು ಮುಟ್ಟಲೂ ಅಸಹ್ಯ ನಿಮಗೆ' ಎಂದು ಮನಸೋ ಇಚ್ಛೆ ಕೂಗಿ ಅತ್ತಳು. ಅನ್ನದ ಬಣ್ಣ ಕಾಣಲು ಬಂದ ಅತ್ತೆಗೆ ಇವೆಲ್ಲಾ ಕಾಣದಿದ್ದೀತೆ!

ಚಂಡಿಯ ಅಪರಾವತಾರದ ಸೊಸೆಯ ಕೈಯಲ್ಲಿ ಮಗ ಏಗುತ್ತಿದ್ದುದು ಹೇಗೋ ಅಂತ ಅವಳಿಗೆ ಮಗನ ಮೇಲೆ ಪ್ರೀತಿಕರುಣೆ ಉಕ್ಕಿಹರಿಯುತ್ತಿತ್ತು.

ಹೆಂಡತಿಯ ಈ ಅವತಾರವನ್ನೇ ಕಂಡಿರದ ಪುರುಷೋತ್ತಮ ಒಂದು ಮಾತನ್ನೂ ಆಡದೆ, ಆಸರಿಯನ್ನೂ ಕುಡಿಯದೆ ಆಫೀಸಿಗೆ ಹೊರಟುಬಿಟ್ಟ. ಆದರೆ ಅಂದು ಆಫೀಸಿಗೆ ಹೊರಟವನು ಮತ್ತೆ ಬರಲಾರ ಎಂದು ಶಾರಿಗೆಲ್ಲಿ ತಿಳಿದಿತ್ತು. ಕೆಮ್ಮುತ್ತ ನೆಲಕ್ಕೆ ಬಿದ್ದವನು ಮತ್ತೆ ಮೇಲೇಳಲಿಲ್ಲ. ವಿಷಯ ತಿಳಿದಿದ್ದೇ ಶಾರಿ ಯಾವುದಕ್ಕೆ ಅಳಲಿ – ಪುರುಷೋತ್ತಮನನ್ನು ಎಂದೂ ನೋಯಿಸದವಳು ಅಂದು ನೋಯಿಸಿದ್ದಕ್ಕಾಗೋ, ಎರಡು ಮಕ್ಕಳ ತಾಯಿಯ ಬದುಕು ಇನ್ನು ಹೇಗೆ ಅಂತಲೋ, ಪುರುಷೋತ್ತಮ ಮತ್ತೆ ಬರಲಾರ ಅಂತಲೋ... ಪುರುಷೋತ್ತಮನ ಸಾವು ಕಾಡುತ್ತಿತ್ತಾದರೂ ಅಂದು ಜಗಳವಾಗದೇ ಇದ್ದಿದ್ದರೆ ಇಷ್ಟೊಂದು ಕಾಡುತ್ತಿರಲಿಲ್ಲ. ಎಂದೂ ಮಾಡದವಳು ಅಂದೇ ಏಕೆ ಜಗಳ ಮಾಡಿದೆ ಎಂದು ತನ್ನನ್ನೇ ತಾನು ಸಾರಿಸಾರಿ ಕೇಳಿಕೊಂಡಳು ಶಾರಿ.

ಅತ್ತೆ ಮಾವನ ಕಣ್ಣಲ್ಲೂ, ಸ್ವತಃ ತನ್ನ ಕಣ್ಣಲ್ಲೂ ಆ ಜಗಳ ಶಾರಿಯನ್ನು ಕುಗ್ಗಿಸಿಬಿಟ್ಟಿತ್ತು. ಗಂಡ ಎಂದು ಅವನನ್ನು ಎಷ್ಟು ಪ್ರೀತಿಸಿದ್ದಳೆಂಬುದು ಅವಳಿಗೆ ತಿಳಿದಿಲ್ಲವಾದರೂ ಅವನಿಲ್ಲದೆ ಮನಸ್ಸೆಲ್ಲ ಬಿನ್ನಗಾಗಿತ್ತು. ಮಕ್ಕಳೂ ಅಪ್ಪನನ್ನು ಬಹಳ ನೆನೆಯುತ್ತಿದ್ದರು.